International Journal of Kannada Research 2021; 7(2): 119-126




International Journal of Kannada Research
www.kannadajournal.com

**ISSN: 2454–5813**
IJKR 2021; 7(2): 119-126
© 2021 IJKR
www.kannadajournal.com
Received: 25-02-2021
Accepted: 27-03-2021

**ಡಾ. ಉಮಾದೇವಿ ಆರ್**
ದಂಡೋತಿ(ಮಟ್ಟಿ) ಕನ್ನಡ
ಸಹಾಯಕ ಪ್ರಾಧ್ಯಾಪಕರು

**ಡಾ. ಅಂಬೇಡ್ಕರ್**
ಪ್ರಥಮ ದರ್ಜೆ ಕಾಲೇಜು,
ರಂಗಂಪೇಟ್, ಸುರಪುರ.

**Corresponding Author:**
**ಡಾ. ಉಮಾದೇವಿ ಆರ್**
ದಂಡೋತಿ(ಮಟ್ಟಿ) ಕನ್ನಡ
ಸಹಾಯಕ ಪ್ರಾಧ್ಯಾಪಕರು
ಮೊಬೈಲ್

# ಮುಸ್ಲಿಂ ತತ್ವಪದಕಾರರು

**ಡಾ. ಉಮಾದೇವಿ ಆರ್, ಡಾ. ಅಂಬೇಡ್ಕರ್**

ಕನ್ನಡ ಸಾಹಿತ್ಯವು ಸಾವಿರಾರು ನದಿಗಳ ಸಂಗಮವಾಗಿದೆ. ಇಲ್ಲಿ ಜನಪದ ಸಾಹಿತ್ಯ, ವಚನ ಸಾಹಿತ್ಯ, ದಾಸ ಸಾಹಿತ್ಯದ ನದಿಗಳು ತುಂಬಿ ಹರಿದಿವೆ. ಇವುಗಳಲ್ಲಿ ವಿಶ್ವ ಸಾಹಿತ್ಯದಲ್ಲಿಯೇ ಹೆಸರು ಮಾಡಿದ ಶರಣ ಸಾಹಿತ್ಯವು ಮಣಿಮುಕುಟದಂತೆ ರಾರಾಜಿಸುತ್ತದೆ. ಇದಕ್ಕೆ ಸಂವಾದಿಯಾದ ಸಾಹಿತ್ಯವೆಂದರೆ ಅದು ತತ್ವಪದ ಸಾಹಿತ್ಯ. ಇದು ಅನುಭಾವಿಗಳ ಹಾಗೂ ಕಾಯಕ ಜೀವಿಗಳ ಕಾರ್ಯಕ್ಷೇತ್ರವಾಗಿದೆ. ತತ್ವಪದಕಾರರು ಒಂದೇ ಮತಕ್ಕೆ ಸೇರಿದವರಲ್ಲ. ಅವರ ತತ್ವಗಳು ಸಮಾಜೋಧಾರ್ಮಿಕ ಪರಿಕಲ್ಪನೆಗಳಾಗಿವೆ. ಅವರದು ವೈವಿಧ್ಯತೆಯಲ್ಲಿ ಏಕತೆಯನ್ನು ಮೂಡಿಸುವ ಮನೋಧರ್ಮವಾಗಿದೆ. ಸಮಾಜದಲ್ಲಿ ತುಂಬಿರುವ ಅಸಮಾನತೆಯ ಭಾವನೆಯನ್ನು ತೊಡೆದು ಹಾಕಲು ಅವರು ಆಯ್ಕೆ ಮಾಡಿಕೊಂಡಿರುವ ಸಾಧನವೆಂದರೆ ಅದುವೇ ಆಧ್ಯಾತ್ಮಿಕತೆ. ಆಡುಭಾಷೆಯನ್ನೇ ಬಳಸಿ ಅನೇಕ ತತ್ವಪದಗಳನ್ನು ರಚಿಸುವುದರ ಮೂಲಕ ಜನತೆಯಲ್ಲಿ ವೈಚಾರಿಕತೆಯ ಪ್ರಜ್ಞೆಯನ್ನು ಬಿತ್ತುವ ಪ್ರಯತ್ನ ಮಾಡಿದರು. ಜನಪದರ ಬದುಕಿನ ಬೇರಿನಿಂದ ಜನಪದ ಸಾಹಿತ್ಯ ಬೆಳವಣಿಗೆ ಕಂಡಿರುವಂತೆ ತತ್ವಪದಕಾರರು ಕೂಡ ಜನಪದ ಸಾಹಿತ್ಯದಿಂದಲೇ ಬೆಳೆದ ಕವಿಗಳು. ಅವರು ಆಧ್ಯಾತ್ಮಿಕ ಜೀವಿಗಳಷ್ಟೆ ಅಲ್ಲ, ಅನುಭಾವಿಗಳು ಹೌದು. ಆಧ್ಯಾತ್ಮವೇ ಜೀವಾಳವಾಗಿಸಿಕೊಂಡ ತತ್ವಪದಗಳ ಉಗಮ ಹನ್ನೆರಡನೇ ಶತಮಾನದಲ್ಲಿಯೆ ಆಯಿತೆಂದು ಹೇಳಬಹುದು. ಅದ್ಯ ವಚನಕಾರ ಜೇಡರ ದಾಸಿಮಯ್ಯನಿಂದ ಹಿಡಿದು ಬಸವಣ್ಣ, ಅಕ್ಕಮಹಾದೇವಿ, ಅಲ್ಲಮ ಪ್ರಭು ಮೊದಲಾದ ಶಿವಶರಣರು ತಮ್ಮ ಆತ್ಮಗತವಾದ ಅನುಭವಗಳನ್ನು ವಚನಗಳ ರೂಪದಲ್ಲಿ ರಚಿಸಿರುವರು. ಇಲ್ಲಿನ ವಚನಗಳಿಗೆ ಭಕ್ತಿಯೇ ಮೂಲ ದ್ರವ್ಯವಾಗಿದೆ. ವಚನಗಳ ಜೊತೆಗೆ ಸ್ವರ ಮಾಧುರ್ಯದಿಂದ ಹಾಡುವ ಹಾಡುಗಳಿಗೆ ಸ್ವರವಚನಗಳೆಂದು, ಅನುಭಾವ ಪದಗಳೆಂದು, ತತ್ವಪದಗಳೆಂದು ಹಾಗೂ ಭಜನೆ ಪದಗಳೆಂದು ಕರೆಯುತ್ತಾರೆ. ದೇವರನ್ನು ಒಲಿಸುವ ಕೀರ್ತನೆಗಳ ಜೊತೆಜೊತೆಗೆ ಆಧ್ಯಾತ್ಮಿಕ ವಿಚಾರಗಳನ್ನು ಕುರಿತು ತಿಳಿಹೇಳುವ ಪ್ರಯತ್ನವಾಗಿ ತತ್ವಪದಗಳು ಮೂಡಿಬಂದವು. ಜನಜೀವನದಲ್ಲಿರುವ ಗಹನವಾದ ವಿಚಾರಗಳನ್ನು ಸರಳವಾಗಿ ಹೇಳುವ ತತ್ವಪದಗಳು ಬುದ್ಧಿ ಭಾವಗಳಿಗೆ ಪ್ರೇರಣೆ ನೀಡುವ ಸುಂದರ ಗೀತೆಗಳಾಗಿವೆ. ಅನುಭಾವ ಸಾಹಿತ್ಯ ವನ್ನೊಳಗೊಂಡ

ಈ ತತ್ವಪದಗಳು ತಾತ್ವಿಕ ಚಿಂತನೆ ಹಾಗೂ ಸಾಮಾಜಿಕ ಕಳಕಳಿಯಿಂದ ಕೂಡಿದ್ದಾಗಿವೆ. ಸಮಾಜದಲ್ಲಿ ತುಂಬಿರುವ ನೋವು- ನಲಿವು, ಕಷ್ಟ- ಕಾರ್ಪಣ್ಯ, ಆಚಾರ- ವಿಚಾರ, ಹುಟ್ಟು- ಸಾವು ಅಲ್ಲದೆ ಅಂತರಂಗದ ಅರಿವು, ಗುರುವಿನ ಮಹತ್ವ, ಮೋಕ್ಷ ಮುಂತಾದ ಬದುಕಿನ ಮೌಲ್ಯಗಳನ್ನು ಈ ತತ್ವಪದಗಳು ಸಾರಿ ಹೇಳುತ್ತವೆ. ಆತ್ಮೋದ್ಧಾರವೆ ತತ್ವಪದಗಳ ಪ್ರಧಾನ ಲಕ್ಷಣವಾಗಿದೆ. ಸಾಧಕನಾದವನು ತನ್ನನ್ನು ಸಾಧನೆಯ ಮಾರ್ಗದಲ್ಲಿ ತೊಡಗಿಸಿಕೊಳ್ಳುತ್ತಲೆ ಆತ್ಮವನ್ನು ಪರಮಾತ್ಮನಲ್ಲಿ ಅನುಸಂಧಾನಗೊಳಿಸುತ್ತಾನೆ. ಆತ್ಮ ಪರಮಾತ್ಮನಲ್ಲಿ ಅನುಸಂಧಾನಗೊಳ್ಳುವ ಪರಿಯನ್ನೇ' ಅನುಭಾವ ' ಎಂದು ಕರೆಯುತ್ತಾರೆ. ಅನುಭಾವವು ಮನುಷ್ಯನ ಬುದ್ಧಿ ತರ್ಕಗಳಿಗೆ ನಿಲುಕುವಂತಹದಲ್ಲ. ಇವು ಅಂತರಂಗವನ್ನು ಶೋಧಿಸಲಾರವು. ಅಧ್ಯಾತ್ಮವೊಂದೆ ಅಂತರಂಗವನ್ನು ಶೋಧಿಸುವ ಶಕ್ತಿ ಹೊಂದಿರುತ್ತದೆ. ಅದು ಆಧ್ಯಾತ್ಮ ಸಾಧನೆಯಲ್ಲಿರುವ ಅನುಭಾವಿಗೆ ಮಾತ್ರ ಸಾಧ್ಯವಾಗುತ್ತದೆ. ಇಂತಹ ಆತ್ಮಸಂಧಾನ ತತ್ವಪದಕಾರರದು ಅವರು ಒಂದರ್ಥದಲ್ಲಿ ಅನುಭಾವಿಗಳೇ ಆಗಿರುವರು.

ವೈಚಾರಿಕವಾಗಿ ಆಧ್ಯಾತ್ಮಿಕತೆಯಲ್ಲಿ ಮಿಂದ ತತ್ವಪದಕಾರರು ಮೂಢನಂಬಿಕೆ, ಕಂದಾಚಾರ ಹಾಗೂ ಆಷಾಢಭೂತಿತನವನ್ನು ಬಲವಾಗಿ ಖಂಡಿಸಿದರು. ಆಸೆ, ಆಮಿಷ, ಮೋಸ ಹಾಗೂ ವಂಚನೆಗಳನ್ನು ತಮ್ಮದೇ ಆದ ಅನುಭಾವಿಕ ಭಾಷಾ ಶೈಲಿಯಿಂದ ವಿಡಂಬಿಸಿದ್ದಾರೆ. ಜನಸಮ್ಮತ ವಿಚಾರಗಳು ಬದುಕಿನ ಆಗುಹೋಗುಗಳ ಚರ್ಚೆ, ನೀತಿ ಮುಂತಾದ ಮೌಲಿಕ ವಿಚಾರಗಳನ್ನು ಇವರ ತತ್ವಪದಗಳಲ್ಲಿ ಕಾಣಬಹುದಾಗಿದೆ. ಈ ತತ್ವಪದಗಳ ಮುಖ್ಯ ಆಶಯ ಬದುಕಿನ ನಶ್ವರತೆ. ಇದನ್ನು ಅರಿಯಲು ಗುರುವಿನ ಅವಶ್ಯಕತೆ ಇದೆ ಎಂದು ತತ್ವಪದಕಾರರು ಒತ್ತಿ ಹೇಳುತ್ತಾರೆ. ಗುರುವಿನಿಂದ ಅರಿವು ಪಡೆದುಕೊಂಡರೆ ಮುಕ್ತಿಮಾರ್ಗ ಗೋಚರಿಸುತ್ತದೆ. ಎಂಬುದು ಇವರ ನಿಲುವಾಗಿದೆ. ಗುರು - ಲಿಂಗ, ಆತ್ಮ- ಪರಮಾತ್ಮ,

ಭಕ್ತಿ- ವೈರಾಗ್ಯ, ಸಮಾಜ- ಸಂಸ್ಕೃತಿ, ಪಾರಮಾರ್ಥ- ಮೋಕ್ಷ ಹೀಗೆ ಒಟ್ಟಾಗಿ ಎಲ್ಲ ವಿಷಯಗಳನ್ನು ಒಳಗೊಂಡ ತತ್ವಪದಗಳು ಜನರನ್ನು ಸನ್ಮಾರ್ಗದಲ್ಲಿ ನಡೆಸಲು ದಾರಿದೀಪವಾಗಿವೆ. ತತ್ವಪದಕಾರರ ಇನ್ನೊಂದು ವಿಶೇಷತೆ ಎಂದರೆ ಜನರನ್ನು ರಂಜಿಸಲು ಸಂಗೀತವನ್ನು ಬಳಸಿಕೊಂಡರು. ತತ್ವಪದಗಳನ್ನು ರಾಗವಾಗಿ ಹಾಡುವುದರ ಮೂಲಕ ಜನಮನವನ್ನು ಆಕರ್ಷಿಸಿ ಅವರಲ್ಲಿ ಮಾನವೀಯ ಮೌಲ್ಯಗಳನ್ನು ಬಿತ್ತಲು ಪ್ರಯತ್ನಿಸಿದರು. ಅನೇಕ ಹಳ್ಳಿಗಳಲ್ಲಿ ಇಂದಿಗೂ ಹಿಂದೂ ಮುಸ್ಲಿಂ ಹಾಗೂ ದಲಿತರೆಲ್ಲರು ಭಜನೆಯ ಸಂದರ್ಭದಲ್ಲಿ ತತ್ವಪದಗಳನ್ನು ಹಾಡುವ ಪರಂಪರೆಯನ್ನು ಕಾಣುತ್ತೇವೆ. ಇಲ್ಲಿ ಯಾವುದೇ ಮತ ಧರ್ಮ, ಮೇಲು ಕೀಳುಗಳಿಗೆ ಅವಕಾಶವಿಲ್ಲ. ಇದು ಮತೀಯ ಸಾಮರಸ್ಯಕ್ಕೆ ಸಂಕೇತವಾಗಿದೆ. ಬಸವಾದಿ ಶರಣರು ವೀರಶೈವ ಸಿದ್ಧಾಂತದ ನೆಲೆಯಲ್ಲಿ ಹಾಡುಗಳನ್ನು ರಚಿಸಿದರೆ ತತ್ವಪದಕಾರರು ಸಮಾಜೋಧಾರ್ಮಿಕ ನೆಲೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಜನಜೀವನವನ್ನು ಹಸನುಗೊಳಿಸುವ ನಿಟ್ಟಿನಲ್ಲಿ ಹಾಡುಗಳನ್ನು ರಚಿಸಿದ್ದಾರೆ. ಇವರು ಯಾವುದೇ ಸಾಂಸ್ಥಿಕ ಧರ್ಮವನ್ನು ಅನುಸರಿಸಿದವರಲ್ಲ. ಅಂತರಂಗದ ಅರಿವಿನ ನಿರೂಪಣೆ ಮತ್ತು ಅನುಭಾವದ ಪ್ರತಿಪಾದನೆಗೆ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ. ತತ್ವಪದಕಾರರು ಧರ್ಮಾತೀತವಾದ ನೆಲೆಯಲ್ಲಿ ನಿಂತು ಮಾನವತೆಯನ್ನು ಎತ್ತಿ ಹಿಡಿದವರು. ಹುಟ್ಟಿದ ಜಾತಿ ಧರ್ಮಕ್ಕಿಂತ ಮನುಷ್ಯ ಪಡೆದುಕೊಂಡ ರೀತಿ ನೀತಿ ಸಂಸ್ಕಾರಗಳು ಮುಖ್ಯ ಎಂಬುದನ್ನು ತಮ್ಮ ನಡೆನುಡಿಗಳ ಮೂಲಕ ಹಲವು ಜಾತಿ ಧರ್ಮದ ತತ್ವಪದಕಾರರು ಒಗ್ಗಟ್ಟಾಗಿ ಅನುಭಾವ ಪಥದಲ್ಲಿ ಸಾಗಿ ಸಂಸಾರ ನಶ್ವರವೆಂದು ಭಾವಿಸಿ ಪಾರಮಾರ್ಥವೆ ಪರಮ ಸತ್ಯವೆಂಬುದನ್ನು ಜಗಕ್ಕೆ ತೋರಿಸಿ ಕೊಟ್ಟರು.

ಮುಸ್ಲಿಮರಾಗಿ ಹುಟ್ಟಿ ವೀರಶೈವ ತತ್ವಾಚರಣೆಗಳನ್ನು ಅನುಸರಿಸಿ ಅವುಗಳನ್ನೇ ತಮ್ಮ ಹಾಡುಗಳಲ್ಲಿ ಎರಕ ಹೊಯ್ದ ಮುಸ್ಲಿಂ ತತ್ವಪದಕಾರರ ಕೊಡುಗೆ ವಿಶಿಷ್ಟವಾದುದು. ಅವರಲ್ಲಿ ಪ್ರಮುಖರಾದವರೆಂದರೆ ಶಿಶುನಾಳ ಶರೀಫ, ಚನ್ನೂರು ಜಲಾಲ ಸಾಬ್, ಮೋಟ್ನಳ್ಳಿ ಹಸನ್ ಸಾಬ್ ಸಾವಳಗಿ ಮಹ್ಮದ್ ಸಾಬ್, ಮಹಾಗಾಂವ ಮೀರಾ ಸಾಬ್ ಇವರಲ್ಲದೆ ಇನ್ನು ಅನೇಕ ಜನ ಮುಸ್ಲಿಂ ತತ್ವಪದಕಾರರಾದ ಅರವಲಿ ಬಿಜಲಿ ವಸ್ತಾದ, ಕೊಳ್ಳುರು ಹಸನ್ ಸಾಬ್, ಮಂಜರ್ಲಾ ಖಾದರ್ ಸಾಬ್, ಇಂಗಳೇಶ್ವರದ ಲಾಲ್ ಸಾಬ್, ಬೇನೂರಿನ ಖಾಕಿಪೀರ, ಕಾಳಗಿ ಮಶಾಕ್ ಸಾಬ್ ಮುಂತಾದವರು ಅನುಭಾವದ ಉತ್ತುಂಗಕ್ಕೇರಿ ಆಧ್ಯಾತ್ಮದ ಔನತ್ಯವನ್ನು ಸಾಧಿಸಿದ್ದಾರೆ. ಪಕ್ವಗೊಂಡ ಮನಸ್ಸಿನ ಪಾರಮಾರ್ಥಿಕತೆಯನ್ನು ಜನಸಾಮಾನ್ಯರಿಗೆ ಬೋಧಿಸಿ ಮುಕ್ತಿಪಥದ ಮಾರ್ಗವನ್ನು ತೋರಿದ್ದಾರೆ. ಜಾತಿ ಧರ್ಮಗಳಿಗಿಂತ ಬದುಕಿನಲ್ಲಿ ನಾವು ನಂಬಿಕೊಂಡು ಬಂದ ತತ್ವಗಳು, ಅರಿವಿನಿಂದ ಇಟ್ಟ ದಿಟ್ಟ

ಹೆಜ್ಜೆಗಳು ಎಂಬುದನ್ನು ತಮ್ಮ ಜೀವನದ ಮೂಲಕ ಸಾಬೀತು ಪಡಿಸಿದ್ದಾರೆ.

**೨. ಚನ್ನೂರು ಜಲಾಲ್ ಸಾಬ್:**

ಚನ್ನೂರು ಜಲಾಲ್ ಸಾಬರು ಸಗರ ನಾಡಿನ ಅವಧೂತ ಹಾಗೂ ಸೂಫಿ ಪರಂಪರೆಯ ಪ್ರತೀಕವಾಗಿ ಬಾಳಿ ಬೆಳಗಿದ್ದಾರೆ. ಕಡಕೋಳ ಮಡಿವಾಳಪ್ಪನವರನ್ನು ಗುರುವನ್ನಾಗಿ ಮಾಡಿಕೊಂಡು ಅವರ ಹೆಸರನ್ನೇ ಅಂಕಿತ ನಾಮವನ್ನಾಗಿಟ್ಟುಕೊಂಡು ತತ್ವಪದಗಳನ್ನು ರಚಿಸಿ ಮಹಾನ್ ತತ್ವಪದಕಾರರೆನಿಸಿಕೊಂಡಿದ್ದಾರೆ. ಮಡಿವಾಳಪ್ಪನವರ ಶಿಷ್ಯ ಸಮೂಹದಲ್ಲಿದ್ದುಕೊಂಡು ಹಿಂದೂ ಮುಸ್ಲಿಂ ಭಾವೈಕ್ಯತೆಯ ಹರಿಕಾರರೆನಿಸಿಕೊಂಡಿದ್ದರು. ಚನ್ನೂರು ಜಲಾಲ್ ಸಾಬರು ಜನರ ಮನದಲ್ಲಿ ವಿಶೇಷ ಸ್ಥಾನವನ್ನು ಪಡೆದ ಮಹಾ ಸಂತರು. ಮಾನವೀಯತೆಯನ್ನು ಮೆರೆದ ಅದಮ್ಯ ಚೇತನ ಇವರು ನಬೀಲಾಲ್ ಪಟೇಲ್ ಮತ್ತು ನಬೂಮ್ಮಬಿ ಅವರ ಮಗನಾಗಿ ಗುಲ್ಬರ್ಗಾ ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಚಿಕ್ಕ ಗ್ರಾಮ ಅಣಕ ಸೂಗೂರಿನಲ್ಲಿ ಕ್ರಿ. ಶ. 1770 ರಲ್ಲಿ ಜನಿಸಿದರು. ತಂದೆ ನಬಿಲಾಲ್ ಅವರು ಮಸೀದಿಯ ಖಾಜಿಯಾಗಿ ಧಾರ್ಮಿಕ ಕ್ಷೇತ್ರದಲ್ಲಿ ಹೆಸರು ಮಾಡಿದ್ದರು. ತಂದೆಯ ಆಧ್ಯಾತ್ಮಿಕ ಮಾರ್ಗ ಹಾಗೂ ಧರ್ಮ ಸಮನ್ವಯ ದೃಷ್ಟಿ ಜಲಾಲ್ ಸಾಬರ ಮೇಲೆ ಪ್ರಭಾವ ಬೀರಿದವು. ಮಗನ ಕಲಿಕೆಯ ಉತ್ಸಾಹ ಸೃಜನ ಶೀಲತೆಯ ಮನೋಭಾವವನ್ನು ಅರಿತ ತಂದೆ ನಾಲವಾರದ ಉರ್ದು ಶಾಲೆಗೆ ಮಗನನ್ನು ಓದಲು ಕಳುಹಿಸಿದರು. ಮಾತೃ ಭಾಷೆಯಾದ ಉರ್ದು ಮಾಧ್ಯಮದ ಕಲಿಕೆಯ ಜೊತೆಗೆ ನಾಲವಾರದ ಕೋರಿ ಸಿದ್ದೇಶ್ವರರ ಮಠದಲ್ಲಿ ನಡೆಯುವ ಕನ್ನಡದ ಪುರಾಣ

ಪ್ರವಚನಗಳನ್ನು ಭಕ್ತಿಯಿಂದ ಕೇಳುವ ಅವಕಾಶ ಜಲಾಲ್ ಸಾಬರಿಗೆ ಏಕಕಾಲದಲ್ಲಿ ದೊರೆಯುವಂತಾಯಿತು. ಜೊತೆಗೆ ಸಂಸ್ಕೃತ ಭಾಷೆಯನ್ನು ಕಲಿತರು. ಹೀಗಾಗಿ ಅವರ ತತ್ವಪದಗಳಲ್ಲಿ ತ್ರಿಭಾಷಾ ಸಮ್ಮಿಶ್ರಣವನ್ನು ಕಾಣುತ್ತೇವೆ.

ಜಲಾಲ್ ಸಾಬರು ತಮ್ಮ ಉಪಜೀವನಕ್ಕಾಗಿ ಹಗಲಿನಲ್ಲಿ ಕೃಷಿಕಾಯಕ ಮಾಡಿ ರಾತ್ರಿ ವೇಳೆಯಲ್ಲಿ ಅಂತರಂಗದ ವಿಕಾಸಕ್ಕಾಗಿ ಬಸವ ಪುರಾಣದ ಪ್ರವಚನ ಮಾಡತೊಡಗಿದರು. ಇದನ್ನು ಸಹಿಸದ ಸ್ವಜಾತಿಯವರೇ ಜಲಾಲ್ ಸಾಬರ ವಿರುದ್ಧ ನಿಜಾಮನಿಗೆ ದೂರು ಸಲ್ಲಿಸಿದರು. ನಿಜಾಮರಿಂದ ಜಲಾಲ್ ಸಾಬರಿಗೆ ಜೈಲು ಶಿಕ್ಷೆಯು ಆಯಿತು. ಕೆಲವು ದಿನಗಳು ಕಳೆದ ನಂತರ ನಿಜಾಮರು ಚರ್ಮ ವ್ಯಾಧಿಯಿಂದ ಬಳಲುತ್ತಿದ್ದರು. ಆಗ ಜಲಾಲ್ ಸಾಬರು ಒಬ್ಬ ನಾಟಿ ವೈದ್ಯರೆಂದು ತಿಳಿದಮೇಲೆ ರಾಜಪರಿವಾರದವರು ಜಲಾಲ್ ಸಾಬರ ಹತ್ತಿರ ಬಂದು ನಿಜಾಮರ ಚರ್ಮ ವ್ಯಾಧಿಯನ್ನು ಗುಣಪಡಿಸಲು ಕೇಳಿಕೊಂಡರು. ಆಗ ಜಲಾಲ್ ಸಾಬರು ತಮ್ಮ ನಾಟಿ ವೈದ್ಯ ಪದ್ಧತಿಯಿಂದ ನಿಜಾಮರಿಗೆ ಔಷಧೋಪಚಾರ ನೀಡಿ ಚರ್ಮ ವ್ಯಾಧಿಯನ್ನು ಗುಣಪಡಿಸಿದರು. ಇದರಿಂದ ಸಂತೃಪ್ತಗೊಂಡ ನಿಜಾಮರು ಜಲಾಲ್ ಸಾಬರನ್ನು ಶಿಕ್ಷೆಯಿಂದ ಬಂಧ ಮುಕ್ತಗೊಳಿಸಿದರು. ಜೊತೆಗೆ ಬಸವ ಪುರಾಣವನ್ನು ಪಾರಾಯಣ ಮಾಡಲು ಅವಕಾಶ ನೀಡಿದರು. ಬಸವ ಪುರಾಣದ ಜೊತೆಗೆ ಖುರಾನನ್ನು ತೌಲನಿಕವಾಗಿ ಅಧ್ಯಯನ ಮಾಡಿ ವಿಶ್ಲೇಷಿಸುವ ಜಲಾಲ್ ಸಾಬರ ಪಾಂಡಿತ್ಯವನ್ನು ಕಂಡು ನಿಜಾಮರು ಜಲಾಲ್ ಸಾಬರನ್ನು ತುಂಬಾ ಗೌರವಿಸುತ್ತಿದ್ದರು. ಇವರು ಆಧ್ಯಾತ್ಮ ಮಾರ್ಗದಲ್ಲಿ ಮುಂದುವರೆದು ಅನೇಕ ತತ್ವಪದಗಳನ್ನು ರಚಿಸುವುದರ ಮೂಲಕ ಜನಪ್ರಿಯತೆಯನ್ನು ಪಡೆದುಕೊಂಡಿದ್ದರು. ಜಲಾಲ್ ಸಾಬರು ಧರ್ಮ ನಿಷ್ಠೆಯ ಮಾರ್ಗದಲ್ಲಿ ನಡೆದು ಇತರರ ನೋವಿಗೆ ಸ್ಪಂದಿಸುತ್ತ ಹಲವು ರೀತಿಯ ಸಮಾಜ ಕಾರ್ಯಗಳನ್ನು ಮಾಡುತ್ತ ಮುಂದುವರೆದರು. ಜಲಾಲ್ ಸಾಬರ ಸೇವೆಯನ್ನು ಕಂಡು ಅನೇಕ ಜನರು ಅವರ ಹತ್ತಿರಬಂದು ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಪಡೆದುಕೊಳ್ಳುತ್ತಿದ್ದರು. ಅದೇ ರೀತಿ ಜೇವರ್ಗಿ ತಾಲ್ಲೂಕಿನ ಚನ್ನೂರಿನವರಾದ ಶ್ರೀಧರ ಕುಲಕರ್ಣಿಯವರ ಮನೆಯ ಲ್ಲಿರುವ ಸಮಸ್ಯೆಯನ್ನು ಬಗೆಹರಿಸಿ ಜಲಾಲ್ ಸಾಬರನ್ನು ತಿರುಗಿ ತಮ್ಮ ಹಳ್ಳಿಗೆ ಹೋಗಲು ಬಿಡದೆ ಅವರು ಮಾಡಿದ ಉಪಕಾರಕ್ಕಾಗಿ ತಮ್ಮ ಮನೆಯ ಅರ್ಧ ಭಾಗವನ್ನು ಹಾಗೂ ಹೊಲದಲ್ಲಿ ಅರ್ಧ ಭಾಗವನ್ನು ಕೊಟ್ಟು ಚನ್ನೂರಿನಲ್ಲಿಯೇ ನೆಲೆ ನಿಲ್ಲುವಂತೆ ಮಾಡಿದರು. ಅಂದಿನಿಂದ ಈವರು ಚನ್ನೂರ ಜಲಾಲ್ ಸಾಬರೆಂದೆ ಹೆಸರುವಾಸಿಯಾದರು. ವೀರಶೈವ ತತ್ವಸಿದ್ಧಾಂತಗಳ ದಟ್ಟವಾದ ಪ್ರಭಾವ ಜಲಾಲ್ ಸಾಬರಿಗೆ ಇದ್ದುದರಿಂದ ಜಂಗಮತ್ವದ ಶ್ರೇಷ್ಠತೆಯನ್ನು ಹೀಗೆ ಹೇಳುತ್ತಾರೆ.

ಸಬ್ ಕಹೆತೆ ಈಶ್ವರ ಅಲ್ಲಾ
ಇದರ ಭೇದ ಯಾರಿಗೂ ತಿಳಿದಿಲ್ಲ

ನಿರಾಕಾರಸೆ ಆಕಾರ ಹುವೇ
ವೇದಶಾಸ್ತ್ರಕ್ಕೆ ನಿಲುಕಿಲ್ಲ
ಹಿಂದೂ ಮುಸಲ್ಮಾನ ಶಾಸ್ತ್ರಪಡತೆ ಹೈ
ಗುರುಮನಿ ಕೀಲಿ ಸಿಗಲಿಲ್ಲ.

ಎಂಬುವಲ್ಲಿ ಕನ್ನಡ ಹಾಗೂ ಉರ್ದು ಭಾಷೆಗಳ ಬೆರಕೆಯಲ್ಲಿಯೂ ಭಾಷಾ ಸಾಮರಸ್ಯದ ಮನೋಭಾವವನ್ನು ಕಾಣಬಹುದಾಗಿದೆ. ಹಿಂದೂ ಮುಸ್ಲಿಂ ಕೋಮು ಸೌಹಾರ್ದತೆಯನ್ನು ಸಾರುವುದರ ಜೊತೆಗೆ ದೇವರು ಸರ್ವಾಂತರ್ಯಾಮಿ, ಸರ್ವಶಕ್ತ ಆತನು ನಿರಾಕಾರಿ ಎಂಬ ತತ್ವಕ್ಕೆ ಹೆಚ್ಚು
ಒತ್ತುಕೊಟ್ಟಿರುವುದು ಕಂಡು ಬರುತ್ತದೆ. ಇವರ ಅನೇಕ ತತ್ವಪದಗಳು ಸಾಹಿತ್ಯಕವಾಗಿ ಬಹು ಮೌಲಿಕವಾಗಿದ್ದು ಜನಪದರ ದೃಷ್ಟಿಯಲ್ಲಿಯೂ ವಿಶಿಷ್ಟ ಸ್ಥಾನ ಪಡೆದಿವೆ. ಇವರು ಬರೆದ ತತ್ವಪದಗಳು ಮೊಹರಂ ಹಬ್ಬದ ವಿಶೇಷ ಸಂದರ್ಭಗಳಲ್ಲಿ ಜನಪದರ ನಾಲಿಗೆ ಮೇಲೆ ನಲಿದಾಡುತ್ತವೆ.
ಆದುದರಿಂದಲೇ ಇವರು ಹಿಂದೂ ಮುಸ್ಲಿಂ ಪರಂಪರೆಗೆ ಸೌಹಾರ್ದತೆಯ ಸೇತುವೆಯನ್ನು ಕಟ್ಟಿ ಜನಮನದಲ್ಲಿ ಇಂದಿಗೂ ಶಾಶ್ವತವಾಗಿ ನೆಲೆನಿಂತಿದ್ದಾರೆ.

**೩. ಶಿಶುನಾಳ ಶರೀಫರು:**

ಕನ್ನಡನಾಡಿನ ತತ್ವಪದ ಪರಂಪರೆಯಲ್ಲಿ ಕೇಳಿಬರುವ ಅತ್ಯಂತ ಪ್ರಮುಖವಾದ ಹೆಸರೆಂದರೆ ಶಿಶುನಾಳ ಶರೀಫರದು. ಕರ್ನಾಟಕದ ಮೂಲೆ ಮೂಲೆಗಳಲ್ಲಿ ಇವರ ಹಾಡುಗಳು ಜನರ ನಾಲಿಗೆಯ ಮೇಲೆ ಹರಿದಾಡುತ್ತವೆ. ಹರಿಹರ ಹಜರತ್ ತತ್ವಗಳ ಸಂಗಮದಂತೆ ಬಾಳಿದ ಶರೀಫರು' ಕರ್ನಾಟಕದ ಕಬೀರ ' ಎಂದೇ ಪ್ರಸಿದ್ಧರಾಗಿದ್ದರು. ಶಿಶುನಾಳ ಶರೀಫರು ಕ್ರಿ. ಶ.೧೮೮೯ ರಲ್ಲಿ ಧಾರವಾಡ ಜಿಲ್ಲೆಯ ಶಿಶುವಿನಾಳ ಗ್ರಾಮದಲ್ಲಿ ಜನಿಸಿದರು. ತಂದೆ ಇಮಾಮ ಸಾಬ್ ತಾಯಿ ಹಜ್ಜುಮಾ . ಹಿಂದೂ ಮುಸ್ಲಿಂ ಭಾವೈಕ್ಯತೆಯ ಕನಸು ಹೊತ್ತ ಬಾಲಕ ಶರೀಫ್ ಹರ್ಕೀತಾ ಖಾದ್ರಿ ಎಂಬ ಸಂತನ ಶಿಷ್ಯನಾಗಿ ಪ್ರಾರಂಭಿಕ ವಿದ್ಯಾಭ್ಯಾಸ ಮಾಡಿದರು. ರಾಮಾಯಣ ಮಹಾಭಾರತದಂತಹ ಕಥೆಗಳು ಬಾಲ್ಯದಲ್ಲಿಯೆ ಶರೀಫರ ಮನಸಿನಲ್ಲಿ ನಾಟಿದ್ದವು. ಎರಡು ಧರ್ಮಗಳ ಸಾರವನ್ನು ಹೀರಿ ಬೆಳೆದ ಶರೀಫರು ತಮಗರಿವಿಲ್ಲದಂತೆಯೆ ಆತ್ಮೋದ್ಧಾರದ ಕಡೆಗೆ ಹೆಜ್ಜೆ ಹಾಕಿದರು. ಕಳಸಾಪುರದ ಗುರು ಗೋವಿಂದಭಟ್ಟರು ಶರೀಫರ ನಿಷ್ಠೆಯನ್ನು ಗುರುತಿಸಿ ಅವರನ್ನು ತಮ್ಮ ಶಿಷ್ಯನನ್ನಾಗಿ ಮಾಡಿಕೊಂಡರು. ಹಿಂದೂ ಧರ್ಮದ ಗೋವಿಂದ ಭಟ್ಟರು ಹಾಗೂ ಮುಸ್ಲಿಂ ಜನಾಂಗದ ಶರೀಫರ ಬಾಂಧವ್ಯ ಹಾಲು ಜೇನಿನಂತೆ ಸಮರಸಗೊಂಡಿತು. ಇಂತಹ ಗುರುಗಳ ಸಾನಿಧ್ಯದಲ್ಲಿ ಶರೀಫರ ಬದುಕು ಅರ್ಥಪೂರ್ಣವಾಗಿ ಅರಳಿ ನೂರಾರು ತತ್ವಪದಗಳು ಕನ್ನಡ ನೆಲದಲ್ಲಿ ಹುಟ್ಟಿಕೊಂಡವು. ಶರೀಫರ ತತ್ವಪದಗಳು ಸಾಂದರ್ಭಿಕವಾಗಿ ಮೂಡಿಬಂದ ಆಶು ರಚನೆಗಳು. ಪ್ರತಿಮಾತ್ಮಕವಾದ ಈ ಪದ್ಯಗಳು ಜಾನಪದ ಸೊಗಡಿನಿಂದ ಕೂಡಿದ್ದು ಕೇಳುಗರನ್ನು ಮಂತ್ರ ಮುಗ್ಧ ಗೊಳಿಸುತ್ತವೆ. ಅದಕ್ಕೆ ಅವರ ಈ ಒಂದು ತತ್ವಪದವೇ ಸಾಕ್ಷಿ.

ತರವಲ್ಲ ತಗಿ ನಿನ್ನ ತಂಬೂರಿ
ಸ್ವರ ಬರದೆ ಬಾರಿಸದಿರು ತಂಬೂರಿ
ಸರಸ ಸಂಗೀತದ ಕುರುಹುಗಳರಿಯದೆ
ಬರಿದೆ ಬಾರಿಸದಿರು ತಂಬೂರಿ.

ಎನ್ನುವಲ್ಲಿ ಈ ಕಾಯ ಸ್ಥಿರವಲ್ಲ ಎಂಬುದನ್ನು ತಿಳಿದುಕೊಂಡು ಪರೋಪಕಾರಿಯಾಗಿ ಸಮಾಜೋಧಾರ್ಮಿಕ ಉದ್ಧಾರಕ್ಕಾಗಿ ಈ ದೇಹವನ್ನು ದಂಡಿಸಬೇಕು. ಈ ದೇಹವು ಉತ್ತಮ ಮತ್ತು ಸದ್ಗುಣಗಳಿಂದ ಕೂಡಿದ ಶರೀರವಾಗಬೇಕೇ ವಿನಃ ಅಸತ್ಯ ಆಸೆ ಆಮಿಷಗಳಿಂದ ಕೂಡಿರಬಾರದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಅಂತರಂಗದ ಅನುಭವಗಳನ್ನು ಅರ್ಥಪೂರ್ಣವಾಗಿ ಅಭಿವ್ಯಕ್ತಿಸುವಲ್ಲಿ ಶರೀಫರು ಸಿದ್ಧ ಹಸ್ತರು. ಅತ್ಯಂತ ಸರಳವಾದ ಆಡುನುಡಿಯನ್ನು ಬಳಸಿ ಅದರ ಮೂಲಕ ಅಲೌಕಿಕವಾದ ಅನುಭಾವದ ದರ್ಶನ ಮಾಡಿಸುವುದೇ ಇವರ ತತ್ವಪದಗಳ ವೈಶಿಷ್ಟ್ಯವಾಗಿದೆ.

ಸೋರುತಿಹುದು ಮನೆಯ ಮಾಳಿಗಿ! ಅಜ್ಞಾನದಿಂದ
ಸೋರುತಿಹುದು ಮನೆಯ ಮಾಳಿಗಿ.
ಮುರುಕು ತೊಲೆಯು ಹುಳುಕು ಜಂತಿ
ಕೊರೆದು ಸರಿದು ಕೀಲಸಡಲಿ
ಹರಕ ಚಪ್ಪರ ಜೇರು ಗಿಂಡಿ
ಮೇಲಕ್ಕೇರಿ ಮೆಟ್ಟಲಾರೆ.

ಎಂದು ಹೇಳುವಲ್ಲಿ ಈ ಮಾಯಾ ಪ್ರಪಂಚದಿಂದ ಆದಷ್ಟು ಬೇಗ ಹೊರಬಂದು ಅಂತರಂಗದ ಬೆಳಕನ್ನು ಕಾಣಬೇಕು. ಅಜ್ಞಾನ ಮತ್ತು ಸ್ವಾರ್ಥ ದುರ್ಗುಣಗಳಿಂದ ಮನೆಯ ಮಾಳಿಗೆ ಸೋರುತ್ತಿದೆ. ಹುಳುಕು ತೊಲೆ ಮುರುಕು ಜಂತಿಗಳಿಂದ ಸೋರುತ್ತಿರುವ ಮನದ ಮಾಳಿಗೆಯನ್ನು ಇಂದ್ರಿಯ ನಿಗ್ರಹದ ಮೂಲಕ ಭದ್ರಪಡಿಸಿಕೊಳ್ಳಬೇಕು ಎನ್ನುವುದೇ ಈ ತತ್ವಪದದ ತಾತ್ಪರ್ಯವಾಗಿದೆ. ಅವರು ನುಡಿದುದೆಲ್ಲ ಅನುಭಾವವಾಯಿತು. ಆಡಿದುದೆಲ್ಲ ಆಧ್ಯಾತ್ಮವಾಯಿತು. ನಿತ್ಯಜೀವನದ ಅನುಭವಗಳನ್ನು ಸಾಂಕೇತಿಕವಾಗಿ ಆಧ್ಯಾತ್ಮಿಕ ನೆಲೆಗೇರಿಸಿದ ಹಿರಿಮೆ ಇವರದು. ಶಿಶನಾಳ ಶರೀಫರು ಡಾಂಭಿಕ ಭಕ್ತರ ಕ್ರಿಯಾಚರಣೆಗಳನ್ನು ವಿಡಂಬಿಸುತ್ತ" ಡೋಲಿ ಕಟ್ಟುವುದೇನು? ಡೋಲ್ಯಾಗ ದೇವರಿಡುವುದೇನೋ ಜಾಣ" ಎಂದು ಪ್ರಶ್ನಿಸುತ್ತ ಮೂರ್ತಿ ಪೂಜೆಯನ್ನು ನಿರಾಕರಿಸುತ್ತಾರೆ. ಇಲ್ಲಿ ಶಿಶುನಾಳ ಶರೀಫರು ಹುರುಳಿಲ್ಲದ ಸಂಪ್ರದಾಯಗಳನ್ನು ಖಂಡಿಸಿ ಆತ್ಮೋನ್ನತಿಗೆ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ. ದೇಶ ಸುತ್ತಿದ ಸಂತ, ಕೋಶ ಓದಿದ ಜ್ಞಾನಿ ಶಿಶುನಾಳ ಶರೀಫರು, ಕರ್ನಾಟಕದ ಮಹಾನ್ ಸಂತನಾಗಿ ಬಾಳಿ ಬದುಕಿದ್ದರು. ಶಿಶುನಾಳ ಶರೀಫರು ಹಿಂದೂ ಮುಸ್ಲಿಂ ಸೌಹಾರ್ದತೆಗೆ ಸೇತುವೆಯಾಗಿದ್ದರು. ಜನರಲ್ಲಿನ ಮೌಢ್ಯವನ್ನು ಖಂಡಿಸಿ ಅವರಲ್ಲಿ ವೈಚಾರಿಕತೆಯನ್ನು ಬಿತ್ತಿದ ಉದಾರ ಮನಸ್ಸಿನ ಹೃದಯವಂತರು. ಅಂತಲೇ ಕನ್ನಡ ನಾಡಿನ ಸಮಸ್ತ ಜನತೆಯ ಮನಸಿನಲ್ಲಿ ಶಿಶುನಾಳ ಶರೀಫರ ತತ್ವ ಪದಗಳು ನೆಲೆ ನಿಂತಿವೆ. ಕ್ರಿ. ಶ.1889 ರ ಮಾರ್ಚ 6 ನೇ ತಾರೀಖು ಆಧ್ಯಾತ್ಮದ ಈ ಮಹಾನ್ ಚೇತನ ಪರಮಾತ್ಮನಲ್ಲಿ ಲೀನವಾಯಿತು.

**೪. ಮೋಟ್ನಳ್ಳಿ ಹಸನ ಸಾಬ್:**

ತತ್ವಪದ ಸಾಹಿತ್ಯಕ್ಕೆ ನೀರೆರೆದು ಸಮೃದ್ಧಗೊಳಿಸಿದವರಲ್ಲಿ ಮೋಟ್ನಳ್ಳ ಹಸನ್ ಸಾಬ್ ರು ಬಹು ಉತ್ತುಂಗದಲ್ಲಿ ನಿಲ್ಲುತ್ತಾರೆ. ಹಸನ್ ಸಾಬ್ ರು ಆತ್ಮೋನ್ನತಿಯ ಮೂಲಕ ಅಹಂಕಾರ ನಿರಸನ ಹೊಂದಿ ತತ್ವ ಬೋಧೆ ನೀಡಿದ ಮಹಾಪುರುಷರು. ಇವರ ಹುಟ್ಟೂರು ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ಚಿಕ್ಕ ಗ್ರಾಮ ಇಟಕಾಲ್. ಈತನ ತಂದೆ ತಾಯಿಗಳ ಹೆಸರು ತಿಳಿದು ಬಂದಿಲ್ಲ. ತಂದೆ ತಾಯಿಗಳಿಲ್ಲದ ಹಸನ್ ಸಾಬರಿಗೆ ಗುರುಮಠಕಲ್ ನ ಶ್ರೀ ಶಾಂತವೀರ ಮಹಾ ಸ್ವಾಮಿಗಳೇ ತಂದೆ ತಾಯಿ ಹಾಗೂ ಗುರುವಾಗಿ ಪೋಷಿಸಿದರು. ಶಾಂತವೀರರು ಬಾಲಕನ ಬದುಕು ಹಸನಾಗಲೆಂದು ಹಾರೈಸಿ ಹಸನ್ ಎಂದು ಹೆಸರಿಟ್ಟರು. ಹಸನರಿಗೆ ಶಾಂತವೀರ ಮಹಾಸ್ವಾಮಿಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಲೇ ಆಧ್ಯಾತ್ಮದ ಒಲವು ಹೆಚ್ಚಾಯಿತು. ಹಸನ್ ಸಾಬರು ಗುರುಮಠಕಲ್ ಸಮೀಪದ ಕೋಟಗೇರ ಗ್ರಾಮದ ದೇಶಮುಖರ ಮಕ್ಕಳಿಗೆ ಮನೆಪಾಠ ಮಾಡುತ್ತಿದ್ದರು. ಆದ್ದರಿಂದ ಊರ ಜನರೆಲ್ಲ ಇವರನ್ನು ಉಸ್ತಾದೆಪ್ಪ ಎಂಬ ಅನ್ವರ್ಥಕ ನಾಮದಿಂದಲೇ ಕರೆಯುತ್ತಿದ್ದರು.

ಇವರು ಬಯಲಾಟಗಳನ್ನು ಕಲಿಸುವ ಬಯಲಾಟ ಮಾಸ್ತರರೆಂದು ಕೂಡ ಪ್ರಸಿದ್ದರಾಗಿದ್ದರು. ಇವರು ಮೋಟ್ನಳ್ಳಿ ಅಬ್ಬಾಸಮ ಅವರೊಂದಿಗೆ ವಿವಾಹವಾದರು. ಅಂದಿನಿಂದ ಇವರು ಮೋಟ್ನಳ್ಳಿ ಹಸನ್ ಸಾಬರಾಗಿ ಪ್ರಖ್ಯಾತಿ ಪಡೆದರು. ಹಸನ್ ಸಾಬರು ಇನ್ನೂರಕ್ಕಿಂತ ಹೆಚ್ಚಿನ ತತ್ವಪದಗಳನ್ನು ರಚಿಸುವುದರ ಮೂಲಕ ಜನಪ್ರಿಯತೆಯನ್ನು ಗಳಿಸಿದ್ದರು. ಇವರ ತತ್ವಪದಗಳು ಆತ್ಮಜ್ಞಾನ, ಯೋಗ, ಆಧ್ಯಾತ್ಮ ಹಾಗೂ ಗುರುಮಹಿಮೆಗಳಿಂದ ಕೂಡಿದ್ದು ವೈಚಾರಿಕತೆಯನ್ನು ಬಿತ್ತುವಂತವುಗಳಾಗಿವೆ.

ನಮ್ಮ ದೇವರು ನಿಮ್ಮ ದೇವರು
ಎಲ್ಲಾ ಒಂದೇ ಅಲ್ಲೇನೋ
ನಿನ್ನ ನೀ ತಿಳಿದರೆ ನೀನೇ ದೇವರು
ನಿನ್ನ ಬಿಟ್ಟು ಬೇರೆ ದೇವರಿಲ್ಲೊ

ಎಂಬ ತತ್ವಪದದಲ್ಲಿ ದೇವರು ಒಬ್ಬನೇ ಎಂಬ ಸತ್ಯವನ್ನು ಅರುಹುತ್ತಾರೆ. ಜಾತಿಗೊಂದು ದೇವರೆಂದು ಹೇಳಿಕೊಂಡು ಆ ದೇವರು ಈ ದೇವರು ಎನ್ನುವ ಮತೀಯ ಭಾವನೆಯನ್ನು ಹುಟ್ಟುಹಾಕುವ ಮತಿಹೀನರನ್ನು ಬಲವಾಗಿ ಖಂಡಿಸುತ್ತಾರೆ. ದೇವರು ಸರ್ವಾಂತರ್ಯಾಮಿ ಎಲ್ಲರಿಗೂ ದೇವರು ಒಬ್ಬನೇ ಎಂಬ ದೈವತ್ವದ ಸ್ವಷ್ಟ ಚಿತ್ರಣವನ್ನು ಕೊಡುತ್ತಾರೆ.

ಯಾರಂಜಿಕಿ ನಮಗೆ ಗುರುವಿನ ದಯವಾದ ಮೇಲೆ
ದೂರಮಾಡುವ ದುರ್ಜನ ದುರ್ಗುಣ
ಪಾರುಮಾಡುವ ಪಾಪಕರ್ಮಗಳಿಂದ

ಎನ್ನುವ ಈ ತತ್ವಪದದಲ್ಲಿ ಗುರುವಿನ ಮಹತ್ವವನ್ನು ತಿಳಿಸಿದ್ದಾರೆ. ಗುರು ಕಾರುಣ್ಯ ಪಡೆದರೆ ಬಂದ ಕಷ್ಟಗಳು ಬಯಲಾಗುವವು ಎಂಬ ಸಂದೇಶ ಈ ತತ್ವಪದದಲ್ಲಿ ಅಡಗಿದೆ. ಹಸನ್ ಸಾಬರು ಹಂತ ಹಂತವಾಗಿ ಮೇಲೇರಿ ಸಂತರಾದರು. ಸಾಧನೆಯ ಪಥದಲ್ಲಿ ಮುನ್ನಡೆದರು. ಊರೂರು ಅಲೆದು ಜನಮನದಲ್ಲಿ ತುಂಬಿದ ಅಜ್ಞಾನವನ್ನು ಅಳಿಸಿ ಅನುಭಾವದ ಅಮೃತವನ್ನು ಉಣಬಡಿಸಿದರು. ಒಂದು ರೊಟ್ಟಿ ಕೊಟ್ಟವರ ಮನೆಯಲ್ಲಿ ರಟ್ಟೆ ಸವೆಯುವಷ್ಟು ಜೋಳ ಬೀಸಿ ಕೃತಜ್ಞತೆಯನ್ನು ಮೆರೆದರು. ತಮ್ಮ ಅನುಭಾವದಾಳದಿಂದ ಕೂಡಿದ ತತ್ವಪದಗಳ ರಚನೆಯ ಮೂಲಕ ಜಾತಿಮತ ಪಂಥವೆನ್ನದೆ ಜನರಲ್ಲಿ ಜಾಗೃತಿ ಮೂಡಿಸಿದರು. ಶರಣ ಸಾಹಿತ್ಯದಿಂದ ಪ್ರಭಾವಿತರಾದ ಹಸನ್ ಸಾಬರು ಸತ್ಯ ಶುದ್ಧ ಕಾಯಕದಲ್ಲಿ ತೊಡಗಿ ಅನುಭಾವದ ಎತ್ತರಕ್ಕೇರಿದರು. ವೀರಶೈವ ಸಂಸ್ಕೃತಿಯ ಮಧ್ಯದಲ್ಲಿ ಬೆಳೆದು ವೀರಶೈವ ಧರ್ಮದ ತತ್ವ ಸಿದ್ಧಾಂತಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮಹಾಶಿವಯೋಗಿ ಎನಿಸಿಕೊಂಡರು. ಸಾಮಾನ್ಯ ಜನರ ನಡೆನುಡಿಗಳನ್ನು ತಿದ್ದುವ ಅಪಾರ ಸಂಖ್ಯೆಯ ತತ್ವಪದಗಳನ್ನು ರಚಿಸಿ ತತ್ವಪದಕಾರರ ಚರಿತ್ರೆಯಲ್ಲಿ ಹಸನ್ ಸಾಬರು ವಿಶಿಷ್ಟವಾದ ಸ್ಥಾನವನ್ನು ಪಡೆದುಕೊಂಡಿದ್ದಾರೆ.

**೫. ಸಾವಳಗಿ ಮಹ್ಮದ್ ಸಾಬ್:**

ಸಾವಳಗಿ ಮಹ್ಮದ್ ಸಾಬ್ ಅವರು ಶ್ರೇಷ್ಠ ಅನುಭಾವಿ ಕವಿ ಮತ್ತು ತತ್ವಪದಕಾರರು. ಮುಸಲ್ಮಾನ ಧರ್ಮದಲ್ಲಿ ಜನಿಸಿ ವೀರಶೈವ ಸಂಸ್ಕೃತಿಯ ಮಧ್ಯದಲ್ಲಿ ಬೆಳೆದು ವೀರಶೈವ ತತ್ವಗಳನ್ನು ಅಳವಡಿಸಿಕೊಂಡು ಅನೇಕ ತತ್ವಪದಗಳನ್ನು ರಚಿಸುವುದರ ಮೂಲಕ ಜನಪ್ರಿಯತೆಯನ್ನು ಗಳಿಸಿ ದ್ದಾರೆ.ಗುಲ್ಬರ್ಗಾ ಜಿಲ್ಲೆಯ ಹಿರೆಸಾವಳಗಿ ಗ್ರಾಮದಲ್ಲಿ ಕ್ರಿ.ಶ.1906 ರಲ್ಲಿ ಜನಿಸಿದರು. ಇವರ ತಂದೆ ಮೋದಿನ್ ಸಾಬ್ ಹಾಗೂ ತಾಯಿ ಫಾತಿಮಾಬೀ. ಇವರ ತಂದೆ ಮತ್ತು ಅಜ್ಜ ಹಾಡುಗಾರರಾಗಿದ್ದರೆಂಬುದು ತಿಳಿದು ಬರುತ್ತದೆ. ಇವರು ಅಲ್ಪ ಸ್ವಲ್ಪ ವಿದ್ಯಾಭ್ಯಾಸ ಮಾಡಿದರೂ ಉರ್ದು ಅರಬ್ಬೀ ಹಾಗೂ ಕನ್ನಡ ಭಾಷೆಗಳನ್ನು ಕರಗತ ಮಾಡಿಕೊಂಡಿದ್ದರು. ತಮ್ಮ ಹುಟ್ಟೂರಾದ ಸಾವಳಗಿಯಲ್ಲಿರುವ ಪೆದ್ದಣ್ಣ ಎಂಬುದರಿಂದ ಹಾಡುಗಳನ್ನು ಕಲಿಯುತ್ತ ಮಹ್ಮದ್ ಸಾಬರು ತಾವೇ ಸ್ವತಃ ತತ್ವಪದಗಳನ್ನು ರಚಿಸುವಷ್ಟರ ಮಟ್ಟಿಗೆ ಪ್ರಾವೀಣ್ಯತೆಯನ್ನು ಪಡೆದರು. ಮಹ್ಮದ್ ಎಂಬ ಅಂಕಿತದಲ್ಲಿ ಅನೇಕ ತತ್ವಪದಗಳನ್ನು ರಚಿಸಿ ಚಿರಪರಿಚಿತರಾಗಿದ್ದಾರೆ. ಇವರ ಹಾಡುಗಳಲ್ಲಿ ಅನುಪಮವಾದ ಅನುಭಾವ ಸಾಹಿತ್ಯ ಹದವರಿತು ಮೂಡಿಬಂದಿದೆ. ಕೆಲವು ಹಾಡುಗಳಂತೂ ಗಹನವಾದ ಚಿಂತನೆಗೆ ಹಚ್ಚುತ್ತವೆ. ಆತ್ಮ ಪರಮಾತ್ಮ, ಗುರು ಶಿಷ್ಯ ಸಂಬಂಧ, ಗುರುವಿನ ಮಹತ್ವ ಮುಂತಾದವುಗಳನ್ನು ಇವರ ತತ್ವಪದಗಳಲ್ಲಿ ಗುರುತಿಸಬಹುದಾಗಿದೆ. ಮಹ್ಮದ ಸಾಬರು ಕೂಡ ಗುರುಭಕ್ತಿಯಿಂದ ಹೊರತಾದವರಲ್ಲ. ಗುರುವೇ ಆಧ್ಯಾತ್ಮದ ಮಾರ್ಗತೋರುವ ಮಹಾಚೇತನ ಎಂಬುದನ್ನು ಅವರ ಈ ಒಂದು ತತ್ವಪಡದಿಂದ ಅರಿಯಬಹುದಾಗಿದೆ.

ಸಾವಿರದೆಂಟು ಬ್ರಹ್ಮಾಂಡಗಳಲ್ಲಿ ಸದಾ ಅದರ ಬೆಳಕಿತ್ತ
ಬ್ರಹ್ಮ ವಿಷ್ಣು ರುದ್ರರಲ್ಲಿ ಅವರ ಜುಳುಕಿತ್ತು
ಆ ಮುತ್ತ ಹಚ್ಚು ಮೂಗುತಿ ಸುತ್ತ ಕುತ್ತಿಗೆ ಮಟ್ಟ ಹುಳುಕಿತ್ತ!!

ಲೋಕದಲ್ಲಿ ಗುರುವೇ ಶ್ರೇಷ್ಠ. ಪ್ರತಿಯೊಬ್ಬರ ಬಾಳು ಬೆಳಗುವುದು ಗುರುವಿನ ಜ್ಞಾನದ ಬೆಳಕಿನಿಂದ. ಆ ಗುರುವಿನ ಬೆಳಕು ಬ್ರಹ್ಮ ವಿಷ್ಣು ರುದ್ರರ ತೇಜಸ್ಸಿನಷ್ಟೆ ಪ್ರಖರವಾದುದು. ಆ ಬೆಳಕೆಂಬ ಮುತ್ತನ್ನು ಮುಟ್ಟುವ ಮೊದಲು ಕುತ್ತಿಗೆಯ ತನಕ ಹುಳುಕಿತ್ತು ಎನ್ನುವಲ್ಲಿ ಗುರುವಿನ ಅರಿವಾಗುವುದಕ್ಕಿಂತ ಮುಂಚೆ ಮನಸು ಕತ್ತಲೆಯಿಂದ ತುಂಬಿತ್ತು ಎನ್ನುವ ಭಾವ ಈ ತತ್ವಪದದಲ್ಲಿ ವ್ಯಕ್ತವಾಗಿದೆ. ಡಾಂಭಿಕ ಭಕ್ತರ ಕಪಟತನವನ್ನು ಕುರಿತು ತಮ್ಮ ಇನ್ನೊಂದು ತತ್ವಪದದಲ್ಲಿ ಈ ರೀತಿ ಅಭಿವ್ಯಕ್ತಪಡಿಸಿದ್ದಾರೆ.

ಆಶಾ ಪಾಶ ತೊಳಿಲಾರದೆ ಕಾಶಿಗೆ ಹೋದಿ ಕೊಳಕಿ
ಕಾಶಿಗೆ ಬಂದು ಕಾಸು ಕೊಡಲಾರದೆ ವಾಪಸ್ ತಂದಿ ಗಳಿಕಿ
ಹೇಸಿವಂತ ಪರಂಪರಾ ಉಳಿದಿತ್ತೋ ದೋಷದ ಮಳಕಿ
ಸಾಧು ಸಂತರ ಸತ್ಪುರುಷರ ಸ್ವರೂಪ ಕಂಡು ನಕ್ಕಿ
ಫಕೀರ ಆಕೀರ ಭಿಕಾರಿಗಳಿಗೆ ನೀಡಲಿಲ್ಲ ಅಕ್ಕಿ
ಸೊಕ್ಕಿನಿಂದ ಧಿಕ್ಕರಿಸಿದಕ ಲೆಕ್ಕಿಯೊಳು ಸಿಕ್ಕಿ.

ಭಿಕ್ಷೆಗೆ ಬಂದ ಫಕೀರ ಸಾಧುಗಳಿಗೆ ದಾನ ನೀಡದೆ ಅಹಂಕಾರ ತೋರಿಸಿದಿರಿ ಅದನ್ನು ಬಿಟ್ಟು ಮನಸ್ಸು ಶುದ್ಧವಾಗಿರಿಸಿ ಕೊಂಡು ವಿನಯದಿಂದ ಬದುಕುವುದನ್ನು ಕಲಿಯಬೇಕೆಂದು ಈ ತತ್ವಪದದ ಮೂಲಕ ತಿಳಿಹೇಳಿದ್ದಾರೆ. ಮನುಷ್ಯನ ಬದುಕು ನೀರಮೇಲಿನ ಗುಳ್ಳೆಯಂತೆ ನಶ್ವರವಾದುದು. ಇದ್ದಷ್ಟು ದಿನ ಜೀವನದಲ್ಲಿ ನೆಮ್ಮದಿಯಿಂದರಬೇಕು ನಾಳೆ ಏನಾಗುವುದೆಂಬುದು ಯಾರಿಗೂ ತಿಳಿದಿಲ್ಲ. ವಾಸ್ತವಿಕ ಬದುಕನ್ನು ಒಪ್ಪಿ ನಾಳಿನ ಚಿಂತೆ ಮಾಡದೆ ಇಂದಿನ ಬದುಕು ಒಳ್ಳೆ ಗುಣಗಳಿಂದ ಸಾರ್ಥಕ ಪಡಿಸಿಕೊಂಡರೆ, ಮನುಜ ಬದುಕು ಹಸನಾಗುತ್ತದೆ. ಆದ್ದರಿಂದ ಭವಿಷ್ಯತ್ತಿನ ಬಗ್ಗೆ ವಿಚಾರ ಮಾಡದೇ ಇದ್ದ ಬದುಕಿನಲ್ಲಿಯೆ ನೆಮ್ಮದಿ ಕಾಣಬೇಕೆಂಬುದೆ ಮಹ್ಮದರ ನಿಲುವಾಗಿದೆ. ತತ್ವಪದಕಾರರಾದ ಸಾವಳಗಿ ಮಹ್ಮದ್ ಸಾಬರು ಇಸ್ಲಾಂ ಸಂಸ್ಕೃತಿಗೆ ಒಳಪಟ್ಟರೂ ವೀರಶೈವ ಧರ್ಮದ ಮೌಲ್ಯಗಳು ಅವರ ತನು ಮನಗಳಲ್ಲಿ ತುಂಬಿದ್ದವು. ಅವುಗಳೇ ಅವರ ಅಂತರಂಗದ ಅನುಭಾವದಲ್ಲಿ ಪಕ್ವಗೊಂಡು ತತ್ವಪದಗಳ ರೂಪದಲ್ಲಿ ಹೊರಹೊಮ್ಮಿರುವುದು ಕಂಡು ಬರುತ್ತದೆ. ಇದನ್ನು ಗಮನಿಸಿದರೆ, ಅವರಿಗಿರುವ ವೀರಶೈವ ತತ್ವಾಚರಣೆಗಳ ಬಗೆಗಿನ ಕಾಳಜಿ ವ್ಯಕ್ತವಾಗುತ್ತದೆ. ಹೀಗೆ ಮಹ್ಮದ್ ಸಾಬರು ಎರಡು ಸಂಸ್ಕೃತಿಗಳ ಸೇತುವೆಯನ್ನು ಜೋಡಿಸಿದವರು. ಹಿಂದೂ ಮುಸ್ಲಿಂ ಸಂಸ್ಕೃತಿಗಳ ಸಮ್ಮಿಳಿತವನ್ನು ಹಾಗೂ ಸೌಹಾರ್ದತೆಯನ್ನು ಅವರ ಬದುಕಿನಿಂದ ಕಾಣಬಹುದಾಗಿದೆ.

**೬. ಮಹಾಗಾಂವ ಮೀರಾ ಸಾಬ್:**

ಮೀರಾ ಸಾಬರು ಕಲಬುರ್ಗಿ ಜಿಲ್ಲೆಯ ಮಹಾಗಾಂವ ಗ್ರಾಮದಲ್ಲಿ ಕ್ರಿ. ಶ.1917 ರಲ್ಲಿ ಜನಿಸಿದರು. ಇವರ ತಂದೆ ಕಮಲ್ ಸಾಬ್ ತಾಯಿ ಹುಸೇನಬಿ. ಮೀರಾ ಸಾಬರು ಶ್ರೇಷ್ಠ ಜನಪದ ಹಾಡುಗಾರರಾಗಿದ್ದರು. ಜನಪದ ಸಾಹಿತ್ಯ ಪ್ರಕಾರವಾದ ಹರದೇಶಿ ನಾಗೇಶಿ ಪದಗಳಲ್ಲಿ ನಾಗೇಶಿ ಹಾಡುಗಳನ್ನು ಹಾಡುವುದರಲ್ಲಿ ಇವರು ನಿಸ್ಸೀಮರು. ಅತೀ ಬಡತನದಲ್ಲಿ ಬೆಳೆದರೂ ಪ್ರೀತಿ ವಾತ್ಸಲ್ಯ ಹೃದಯ ವೈಶಾಲ್ಯತೆಗೆ ಕೊರತೆ ಇರಲಿಲ್ಲ. ಮೀರಾ ಸಾಬರ ವಿದ್ಯಾಭ್ಯಾಸ ಕೇವಲ ನಾಲ್ಕನೇ ತರಗತಿ ವರೆಗೆ ಆಗಿದ್ದರೂ ಹಿಂದಿ, ಉರ್ದು, ಅರಬ್ಬೀ ಹಾಗೂ ಕನ್ನಡ ಭಾಷೆಗಳಲ್ಲಿ ಪಾಂಡಿತ್ಯ ಪಡೆದಿದ್ದರು.ಇವರದು ಸರಳ ಸಜ್ಜನಿಕೆಯ ವ್ಯಕ್ತಿತ್ವ. ಮೀರಾ ಸಾಬರ ಆಚಾರ ವಿಚಾರ, ಸದ್ಗುಣ ಸಂಪನ್ನತೆಗಳೇ ಜನರ ಮನಸನ್ನು ಬಹುವಾಗಿ ಆಕರ್ಷಿಸಿದವು. ಮೀರಾ ಸಾಬರ ಪುಣ್ಯಕ್ಕೆ ಚನ್ನಪ್ಪ ಪಾರಾ ಗುರುವಾಗಿ ದೊರೆತು ಇವರನ್ನು ಶ್ರೇಷ್ಟ ಹಾಡುಗಾರರನ್ನಾಗಿ ಮಾಡಿದರು. ಮುಂದೆ ಇವರಿಗೆ ನೀಲೂರಿನ ಶೇಖ್ ಸೈಯದ್ ಷಾ ಇಸ್ಮಾಲ ಸಾಬ್ ಖಾದ್ರಿ ಅವರಿಂದ ಗುರು ಬೋಧೆ ದೊರೆಯಿತು. ಕ್ರಿ. ಶ.1950 ರ ವೇಳೆಗೆ ಮೀರಾಸಾಬರು ಅನೇಕ ಗೀಗೀ ಪದಗಳನ್ನು ಹಾಗೂ ತತ್ವ ಪದಗಳನ್ನು ರಚಿಸುತ್ತಾರೆ. ಇವರ ವಿದ್ವತ್ತನ್ನು ಕಂಡ ಶ್ರೀ ರಮಾನಂದ ತೀರ್ಥರು ಮೀರಾ ಸಾಬರನ್ನು' ಪಂಚಾಕ್ಷರಿ' ಎಂದು ಕರೆದರು. ಈ ಪಂಚಾಕ್ಷರಿ ಎಂಬ ನಾಮವನ್ನೆ ತಮ್ಮ ಅಂಕಿತ ನಾಮವನ್ನಾಗಿ ಮಾಡಿಕೊಂಡು ಅನೇಕ ತತ್ವಪದಗಳನ್ನು ರಚಿಸಿದರು. ಅವರ ತತ್ವಪದಗಳಲ್ಲಿ ಗುರುವಿನ ಮಹತ್ವ, ಶರಣ ಧರ್ಮದ ಪ್ರಭಾವ ಹಾಗೂ ಅದರ ಜೊತೆಗೆ ಸಾಮಾಜಿಕ ಕಾಳಜಿಯು ಎದ್ದು ಕಾಣುತ್ತದೆ.ಗುರುವಿನ ಮಹತ್ವವನ್ನು ಕುರಿತು ತಮ್ಮ ಒಂದು ತತ್ವಪದದಲ್ಲಿ ಹೀಗೆ ಹೇಳುತ್ತಾರೆ.

ಹರ ಮುನಿದರೆ ಗುರು ಕಾಯುವನು
ಗುರುವಿಲ್ಲದೆ ಮಾಡೋ ಶಿವಧ್ಯಾನ
ಮರುವಿನ ಪರದಿ ಹರಿಯೋದು ಒಂದಿನ
ನೀರಮ್ಯಾಲಿನ ಗುರುಳಿ ಸಮಾನ.

ಎಂದು ಹೇಳುವುದರ ಮೂಲಕ ಗುರುವಿಲ್ಲದೆ ಮಾಡುವ ಪೂಜೆ ನೀರಮೇಲಿನ ಗುಳ್ಳೆಗೆ ಸಮಾನ. ಶಿವನಿಗಿಂತಲು ಗುರುವೇ ಶ್ರೇಷ್ಟ ಎಂಬ ಸಂದೇಶವನ್ನು ನೀಡುತ್ತಾರೆ. ಮೀರಾ ಸಾಬರು ಮುಸ್ಲಿಮರಾಗಿದ್ದರೂ ಕೂಡ ಪೂಜಾ ಸಮಯದಲ್ಲಿ ದೇವಿ ಪಾರಾಯಣವನ್ನು ಮಾಡುವ ಮೂಲಕ ವೈವಿಧ್ಯತೆಯಲ್ಲಿ ಏಕತೆಯನ್ನು ಸಾಧಿಸಿದ್ದಾರೆ. ಮೀರಾ ಸಾಬರು ತತ್ವಪದಗಳಲ್ಲದೆ ಅನೇಕ ಸ್ತೋತ್ರ ಪದ, ಜೋಗುಳ ಪದ, ಕೋಲು ಪದ, ಸೋಬಾನೆ ಪದ ಹಾಗೂ ಭಜನೆ ಪದಗಳನ್ನು ರಚಿಸಿ ಅವುಗಳನ್ನು ಹಾಡುವುದರ ಮೂಲಕ ಅತ್ಯಂತ ಜನಪ್ರಿಯತೆಯನ್ನು ಗಳಿಸಿದ್ದರು. ಮನುಷ್ಯನಿಗೆ ಅಸೆಯಿರಬೇಕು ಆದರೆ ದುರಾಸೆ ಇರಬಾರದು. ಅದು ಅವನ ವಿನಾಶಕ್ಕೆ ನಾಂದಿಯಾಗುತ್ತದೆ. ನಾವು ಎಂದಿಗೂ ಇನ್ನೊಬ್ಬರನ್ನು ನಿಂದಿಸಬಾರದು, ಪರನಿಂದೆ ನರಕ ಭಾಜನ. ಇನ್ನೊಬ್ಬರ ಸಂಪತ್ತಿಗೆ ಆಸೆ ಪಡದೆ ದೇವರ ಇಚ್ಛೆಗೆ ಅನುಗುಣವಾಗಿ

ಬದುಕಬೇಕು. ಬದುಕು ನರಕ ಮಾಡಿಕೊಳ್ಳದೆ ನಂದನವನವನ್ನಾಗಿ ಮಾಡಿಕೊಳ್ಳಬೇಕು ಎಂಬ ಹಲವಾರು ಲೌಕಿಕ ವಿಚಾರಗಳು ಇವರ ತತ್ವಪದಗಳಲ್ಲಿ ಅಡಗಿವೆ. ಇವರು ರಚಿಸಿದ ಭಜನೆ ಪದಗಳನ್ನು ಕಲ್ಯಾಣ ಕರ್ನಾಟಕದ ಅನೇಕ ಭಾಗಗಳಲ್ಲಿ ಹಾಡುವುದನ್ನು ಈಗಲೂ ಕಾಣಬಹುದಾಗಿದೆ. ಇವರ ಅಗಾಧವಾದ ಕವಿತ್ವ ಶಕ್ತಿಯೇ ಇವರನ್ನು ಅತ್ಯಂತ ಎತ್ತರದಲ್ಲಿ ನಿಲ್ಲಿಸಿದೆ ಎಂದರೆ ತಪ್ಪಾಗಲಾರದು.

**ಸಮಾರೋಪ:**

ತತ್ವಪದಕಾರರ ಆಶಯವು ವರ್ಣ ಪದ್ಧತಿಯನ್ನು ಮೀರಿ ಸರ್ವಧರ್ಮಗಳ ಸಾಮರಸ್ಯದಿಂದ ಕೂಡಿದ ಸಮಾಜವನ್ನು ನಿರ್ಮಾಣ ಮಾಡುವದಾಗಿದೆ. ಕೆಲವು ತತ್ವಪದಕಾರರು ತಮ್ಮ ಮತ ಧರ್ಮದಲ್ಲಿದ್ದುಕೊಂಡೆ ಪಾರಮಾರ್ಥಿಕ ಪಥವನ್ನು ಹಿಡಿದರೆ ಇನ್ನು ಕೆಲವರು ಅನ್ಯಮತವನ್ನು ಪ್ರವೇಶಿಸುವುದರ ಮೂಲಕ ಅನುಭಾವದ ಎತ್ತರಕ್ಕೇರಿದ್ದಾರೆ. ಇವರೆಲ್ಲರ ಗುರಿ ಅರಿಷಡ್ವರ್ಗಗಳನ್ನು ತ್ಯಜಿಸಿ ಐಹಿಕ ಜೀವನದ ಭ್ರಮೆಯಿಂದ ಮುಕ್ತರಾಗಿ ದೈವ ಸಾಕ್ಷಾತ್ಕಾರದ ಬಾಗಿಲು ತೆರೆಯುವುದಾಗಿದೆ. ಅಂದವಾದ ಶ್ರೀಗಂಧದ ಗಿಡದೊಳು' ಎಂಬ ಅಜ್ಞಾತ ತತ್ವಪದಕಾರನ ಹಾಡಿನಲ್ಲಿ ಅಲ್ಲಮ ಪ್ರಭುಗಳನ್ನು ಅಲ್ಲಮ ಸಾಹೇಬ ಎಂದು ಉಲ್ಲೇಖಿಸಿದ್ದಾರೆ. ವೀರಶೈವ ಕವಿಗಳು ಮುಸ್ಲಿಂ ಪರಂಪರೆಯ ತತ್ವಪದಕಾರರನ್ನು ಗೌರವಿಸುವುದು, ಮುಸಲ್ಮಾನರು ವೀರಶೈವ ಪರಂಪರೆಯ ತತ್ವಪದಕಾರರನ್ನು ಗುಣಗಾನ ಮಾಡಿರುವುದು ಕಂಡುಬರುತ್ತದೆ. ಹೀಗಾಗಿ ಸಮುದಾಯಗಳ ನಡುವೆ ಸಾಮರಸ್ಯವನ್ನು ಮೂಡಿಸುವಲ್ಲಿ ಮುಸ್ಲಿಂ ತತ್ವಪದಕಾರರ ಕೊಡುಗೆ ಅಪಾರವಾಗಿದೆ. ಅವರು ರಚಿಸಿದ ಕನ್ನಡದ ತತ್ವಪದಗಳು ಭಾಷೆ ಹಾಗೂ ತಾತ್ವಿಕತೆಯ ದೃಷ್ಟಿಯಿಂದ ಬಹು ಮೌಲಿಕವಾದ ರಚನೆಗಳಾಗಿವೆ. ಸಾವಳಗಿ ಮಹ್ಮದ್ ಸಾಬ್, ಮಹಗಾಂವ ಮೀರಾ ಸಾಬ್, ಶಿಶುನಾಳ ಶರೀಫ ಸಾಬ್, ಚನ್ನೂರು ಜಲಾಲ್ ಸಾಬ್ , ಮೊಟ್ನಳ್ಳಿ ಹಸನ್ ಸಾಬ್ ಮುಂತಾದವರು ಶರಣರ ಪ್ರಭಾವಕ್ಕೊಳಗಾಗಿ ಸಂಪೂರ್ಣವಾಗಿ ಹಿಂದೂ ಧರ್ಮದ ತತ್ವಾಚರಣೆಗಳನ್ನು ಅಳವಡಿಸಿಕೊಂಡಿರುವುದನ್ನು ಕಾಣುತ್ತೇವೆ. ಇವರಲ್ಲಿ ಹಲವರು ಹಿಂದೂ ದೇವರುಗಳನ್ನು ತಮ್ಮ ಆರಾಧ್ಯ ದೈವವಾಗಿಸಿಕೊಂಡಿದ್ದಾರೆ. ಸಾವಳಗಿ ಮಹ್ಮದ್ ಸಾಬರು ಶಿವಲಿಂಗೇಶ್ವರನ ಭಕ್ತರಾದರೆ ಮಹಾಗಾಂವ ಮೀರಾ ಸಾಬರು ಪಂಚಾಕ್ಷರಿ ಎಂಬ ಅಂಕಿತ ನಾಮವನಿಟ್ಟುಕೊಂಡು ತಮ್ಮ ಕಾವ್ಯ ಧಾರೆಯನ್ನು ಹರಿಸಿದ್ದಾರೆ. ಮೊಟ್ನಳ್ಳಿ ಹಸನ್ ಸಾಬರು ಮಠದಲ್ಲಿ ಬೆಳೆದು ಇಷ್ಟಲಿಂಗಧಾರಣೆ ಮಾಡಿಕೊಂಡಿರುವುದು ವಿದಿತವಾಗುತ್ತದೆ. ಇವೆಲ್ಲವುಗಳಿಂದ ತಿಳಿದು ಬರುವ ವಿಷಯವೇನೆಂದರೆ ಮುಸ್ಲಿಂ ತತ್ವಪದಕಾರರು ಧಾರ್ಮಿಕ ಭಾವೈಕ್ಯತೆಯ ಸಂಕೇತವಾಗಿ ಕಂಡು ಬರುತ್ತಾರೆ. ಇವರು ರಚಿಸಿರುವ ಸ್ವರ ವಚನ ತತ್ವಪದ ಸಾಹಿತ್ಯವು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ ಅತ್ಯಮೂಲ್ಯ ಕೊಡುಗೆಯಾಗಿದೆ.

**ಆಧಾರ ಗ್ರಂಥಗಳು.**


1. ಗುಲ್ಬರ್ಗಾ ಜಿಲ್ಲೆಯ ತತ್ವಪದಕಾರರು - ಡಾ. ಶಾಂತಪ್ಪ ಗುರೋಡೆ
2. ಆಯ್ದ ತತ್ವಪದಗಳು - (ಸಂ) – ಡಾ. ಟಿ.ಎಂ. ಭಾಸ್ಕರ
3. ಆಯ್ದ ತತ್ವಪದಗಳು - (ಸಂ) –ಡಾ. ವೀರಣ್ಣ ದಂಡೆ
4. ಉತ್ತರ ಕರ್ನಾಟಕದ ಭಜನೆ ಹಾಡುಗಳು - (ಸಂ) – ಡಾ. ಸಿ. ಕೆ. ನಾವದಗಿ
5. ವಳಗಿ ಮಹ್ಮದ್ ಸಾಬ್ -(ಸಂ) ಡಾ. ಹರಿಶ್ಚಂದ್ರ ದಿಗ್ಸಂಗಿಕರ್.
6. ಮಹಾಗಾಂವ ಮೀರಾ ಸಾಬ್ - (ಸಂ) ಡಾ. ಟಿ.ಎಂ. ಭಾಸ್ಕರ
7. ಸ್ವರವಚನ ಸಂಪುಟ - (ಸಂ) ಡಾ. ಎಂ. ಎಸ್. ಲಠ್ಠೆ
8. ತತ್ವಪದಗಳ ಸಂಗ್ರಹ -(ಸಂ) ಡಾ. ಉಮಾದೇವಿ ಆರ್. ದಂಡೋತಿ(ಮಟ್ಟಿ)
9. ಕನ್ನಡ ತತ್ವಪದಕಾರರು - ವಿವಿಧ ಲೇಖಕರು
10. ಗುಲ್ಬರ್ಗಾ ಜಿಲ್ಲೆಯ ಅನುಭಾವಿ ಕವಿಗಳು - ಡಾ. ಬಸವರಾಜ ಸಬರದ